ಸುರೇಶ ನಾಗಲಮಡಿಕೆ

# ಪ್ರತಿಮೆಗಳ ಮೂಲಕ ಹೊರಡುವ ಕಥನ

'ಅಸ್ಪೃಶ್ಯ ಗುಲಾಬಿ' ಕಾದಂಬರಿಯ ಬಳಿಕ ವಿ.ಎಂ. ಮಂಜುನಾಥರು 'ಸಿ.ಕೆ. ಜೇಡನ ಆತ್ಮಚರಿತ್ರೆ' ಎಂಬ ಮತ್ತೊಂದು ವಿಶಿಷ್ಟ ಕಾದಂಬರಿಯನ್ನು ಪ್ರಕಟಿಸಿದ್ದಾರೆ. ಆರಂಭದಲ್ಲೇ ಹೇಳುವುದಾದರೆ, ಈ ಎರಡೂ ಬರಹಗಳು ಮುಖ್ಯವಾಗುವುದೇ ಹೊಸಬಗೆಯ ನುಡಿಗಟ್ಟಿನ ಬಳಕೆಯ ಕಾರಣದಿಂದ. ಕಥನವನ್ನು ಕಾವ್ಯದ 'ಪ್ರತಿಮಾ' ಲೋಕದ ಮುಖೇನ ಕಟ್ಟುವ ಬಗೆಯು ಹೊಸತಲೆಮಾರಿನ ಬರಹಗಾರರಲ್ಲಿ ಅಪರೂಪದ ಸಂಗತಿಯಾಗಿದೆ. ಹೆಜ್ಜೆ ಹೆಜ್ಜೆಗೂ ಕಾದಂಬರಿಯಲ್ಲಿ ಕಾಣಸಿಗುವ ಚಿತ್ರಗಳು ಓದುಗನನ್ನು ಚಕಿತಗೊಳಿಸುತ್ತವೆ. ಮತ್ತು ಈ ಚಿತ್ರಣಗಳೇ ಕಾದಂಬರಿಯ ಕಥನವನ್ನು ಹಲವು ಬಾರಿ ಗಟ್ಟಿಗೊಳಿಸುತ್ತವೆ. ಹೀಗೆ ಹೇಳುವಾಗ ಕೆಲವು ಅಪಾಯಗಳಿಗೂ ಲೇಖಕ ಎದುರಾಗಬೇಕಾಗುತ್ತದೆ. ಅದೆಂದರೆ, ವಸ್ತುವಿನೊಂದಿಗೆ ಪರಸ್ಪರ ಕೊಂಡಿಯನ್ನು ಕಳಚಿಕೊಳ್ಳುವುದು. ಮೂಲತಃ ಕವಿಯೂ ಆಗಿರುವ ಮಂಜುನಾಥ್ ರೂಪಕಗಳು ಮತ್ತು ಚಿತ್ರಗಳಿಂದ ತಮ್ಮ ಪಾತ್ರಗಳಿಗೆ ಜೀವ ತುಂಬುವ




**ಸಿ.ಕೆ. ಜೇಡನ ಆತ್ಮಚರಿತ್ರೆ**
(ಕಾದಂಬರಿ)
ಲೇ: ಮಂಜುನಾಥ ವಿ.ಎಂ.
ಪು: 176 ಬೆ: 195
ಪ್ರ: ಆಕೃತಿ ಪುಸ್ತಕ, ನಂ 31/1, 12ನೇ ಮುಖ್ಯರಸ್ತೆ, 3ನೇ ಹಂತ, ರಾಜಾಜಿನಗರ, ಬೆಂಗಳೂರು–560 010

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.**